ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ **239/2017**

ದಿನಾಂಕ **14.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಡಿ.ಡಬ್ಲ್ಯೂ-3

ಪಾಟೀ ಸವಾಲುಃ ವಾದಿಯ ಪರ ಶ್ರೀ ಪಿ.ಎಸ್.ಎಂ ವಕೀಲರಿಂದಃ

ವಾದಿ ಮತ್ತು ಪ್ರತಿವಾದಿಗಳು ಸಂಬಂಧಿಕರು ಎಂದರೆ ಸರಿ. 1 ನೇ ಪ್ರತಿವಾದಿಯ ತಂಗಿ ವಾದಿಯ ತಾಯಿ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳು ನನಗೆ ತಿಳಿದಿದೆ. ದಾವಾ ಸ್ವತ್ತಿನ ಆಜು ಬಾಜು ನನಗೆ ಸೇರಿದ ಜಾಗ ಇಲ್ಲ, ಆದರೆ ರಸ್ತೆಯ ನಂತರ ನನಗೆ ಸೇರಿದ ಜಾಗ ಇದೆ. ದಾವಾ ಸ್ವತ್ತಿನ ಖಾತೆ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ದಾವಾ ಸ್ವತ್ತಿನಲ್ಲಿ ಇರುವ ಮನೆಗೆ ವಾದಿ ಶೀಟ್ ಅಳವಡಿಸಿದ್ದಾರೆ ಎಂದರೆ ಸಾಕ್ಷಿ ಇದ್ದ ಮನೆಯನ್ನು ಕೆಡವಿ ವಾದಿ ಶೀಟ್ ಅಳವಡಿಸಿದ್ದಾರೆ. ದಾವಾ ಸ್ವತ್ತು ಮೊದಲು ವಾದಿಯ ತಂದೆಗೆ ಸೇರಿತ್ತು ಎಂದರೆ ಸರಿಯಲ್ಲ. ವಾದಿಯ ತಂದೆ ತಿಮ್ಮಣ್ಣ ಕಾನೂನು ಪ್ರಕಾರವಾಗಿ ಮಾಲೀಕರಾಗಿ ಸ್ವಾಧೀನದಲ್ಲಿ ಇದ್ದರೂ ಎಂದರೆ ಸರಿಯಲ್ಲ.

2. ವಾದಿಯ ತಂದೆ ನೋಂದಾಯಿತ ದಾನ ಪತ್ರವನ್ನು ವಾದಿಯ ಹೆಸರಿಗೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾನ ಪತ್ರದ ಮೂಲಕ ವಾದಿಯ ಹೆಸರಿಗೆ ಖಾತೆ ಆಗಿದೆ ಮತ್ತು ಅವರ ಹೆಸರಿನಲ್ಲಿ ಮುಟೇಶನ್ ಬರುತ್ತಿದೆ ಎಂದರೆ ಮೋಸದಿಂದ ಪಂಚಾಯ್ತಿಯಿಂದ ಮಾಡಿಕೊಂಡಿದ್ದಾರೆ. ವಾದಿಯ ಹೆಸರಿನಲ್ಲಿ ಖಾತೆ ಸಂಖ್ಯೆ 312 ಎಂದು ಬರುತ್ತಿದೆ ಎಂದರೆ ಸರಿ. ನಾನು ಸಿ.ಕೆ.ಪುರ ಗ್ರಾಮ ಪಂಚಾಯ್ತಿಯಲ್ಲಿ ನನ್ನ ಹೆಂಡತಿ ಮೆಂಬರ್ ಆಗಿದ್ದರು. ಚುನಾವಣೆಯಲ್ಲಿ ವಾದಿ ನನ್ನ ವಿರೋಧಿ ಬಣದವರು ಮತ್ತು ಪ್ರತಿವಾದಿ ನಮಗೆ ಸೇರಿದವರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಗ 2 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ಸೊಸೆ ಎಂದರೆ ಸರಿ.

3. ದಿ.23.10.1982 ರಲ್ಲಿ ತಹಶೀಲ್ದಾರ್ ರವರು ನೀಡಿದ ಜಾಗದ ಹಕ್ಕುಪತ್ರವೇ ಬೇರೆ ದಾವಾ ಸ್ವತ್ತೇ ಬೇರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸೈಟ್ ಗೂ ಹಕ್ಕು ಪತ್ರದ ಸೈಟ್ ಗೂ ದೂರ ದೂರ ಎಂದರೆ ಎರಡು ಸೈಟ್ ಗಳು ಒಂದೆ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸೈಟ್ ನಂ.9 ಎಂದು ನಮೂದಿಸಿದ್ದೇನೆ ಎಂದರೆ ಸರಿ. ಸೈಟ್ ನಂ.9 ರ ಚೆಕ್ಕು ಬಂದಿಯೇ ಬೇರೆ ದಾವಾ ಸ್ವತ್ತಿನ ಚೆಕ್ಕು ಬಂದಿಯೇ ಬೇರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಪರವಾಗಿ ಸುಳ್ಳು ಸಾಕ್ಷ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ